ಪತ್ರಿಕಾಗೋಷ್ಠಿ ಕರೆಯಬಾರದಿತ್ತು. ಒಂದು ಲಿಖಿತ ಹೇಳಿಕೆ ಕಳಿಸಿ ಕೊಟ್ಟಿದ್ದರೆ ಸಾಕಿತ್ತು' ಅಂತ ಹೇಳಿದ ಮೇಲೆ ಅವರಿಗೆ ಪತ್ರಿಕಾಗೋಷ್ಠಿ ಕರೆಯುವಂತೆ ಸಲಹೆ ಕೊಟ್ಟವರ ಮೇಲೆ ಅಸಾಧ್ಯ ಸಿಟ್ಟು ಬಂತು.

ಹದಿನೈದು ದಿನ ಅವರು ಮಠ ಬಿಟ್ಟು ಹೊರಕ್ಕೆ ಬರಲಿಲ್ಲ. ಹೊಸಳ್ಳಿಯವರ ಸಹವಾಸವೇ ಬೇಡ ಎನ್ನುವ ತೀರ್ಮಾನಕ್ಕೆ ಬಂದರು. ಒಂದು ತಿಂಗಳು ಕಳೆದ ಮೇಲೆ ಶ್ರೀಮಠದ ಶಿಕ್ಷಣ ಸಮಿತಿ ಕಲ್ಯಾಣದುರ್ಗ ತಾಲ್ಲೂಕು ಗಡಿಗೆ ಹೊಂದಿಕೊಂಡಿರುವ ಕೈಮರದ ಬಳಿ ಗುರುಕುಲ ಮಾದರಿಯ ಪಬ್ಲಿಕ್ ಶಾಲೆ ತೆರೆಯುವ ಪ್ರಕಟಣೆ ಹೊರಡಿಸಿತು.

ಈ ಎಲ್ಲಾ ಬೆಳವಣಿಗೆಗಳಿಂದ ಮೊದೀನ್ ಹತಾಶನಾದ. ದಿನ ಕಳೆದಂತೆ ಸರಿಹೋಗಬಹುದು ಅನ್ನಿಸಿದರೂ ಕೆಲವು ಸಲ ಕೆಟ್ಟದ್ದೇನೋ ಆಗುತ್ತೆ ಅಂತ ಮನಸ್ಸು ಹೇಳುತ್ತಿತ್ತು. ಮೂರು ತಿಂಗಳು ಕಳೆಯಿತು. ಮಠದವರ ಇಂಗ್ಲಿಷ್ ಗುರುಕುಲ ಶುರುವಾಗಲಿಲ್ಲ. ಸುಧಾಕರನ ನರ್ಸರಿ ಸ್ಕೂಲು ಶುರುವಾಯಿತಾದರೂ ಅದಕ್ಕೆ ಮಕ್ಕಳನ್ನು ಸೇರಿಸಲು ಊರವರು ಹಿಂಜರಿದರು.

ಆಶ್ಚರ್ಯ ಎನ್ನುವಂತೆ ಊರಲ್ಲಿ ಕಬಡ್ಡಿ, ಬ್ಯಾಡ್‌ಮಿಂಟನ್ ಟೂರ್ನಮೆಂಟುಗಳು, ಉಚಿತ ಹೆಲ್ತ್ ಕ್ಯಾಂಪು ಇತ್ಯಾದಿಗಳೆಲ್ಲ ಶುರುವಾದವು. ಊರನ್ನು, ಮನೆಗಳ ಸುತ್ತಲಿನ ಪರಿಸರದ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಅಂತ ಜನರ ಮನೆ ಬಾಗಿಲಿಗೇ ಹೋಗಿ ಉಪದೇಶ ಮಾಡುವ ಗ್ರಾಮ ನೈರ್ಮಲ್ಯ ಸಮಿತಿ ಹೆಸರಿನವರು ಹೊಸಳ್ಳಿಯಲ್ಲಿ ಕಾಣಿಸಿಕೊಂಡರು!

ನಮ್ಮದು ದೇಶವ್ಯಾಪಿ ನಡೆಯುತ್ತಿರುವ ಅಭಿಯಾನ ಅಂತ ಹೇಳಿಕೊಂಡು ನಿತ್ಯವೂ ಐದಾರು ಜನ ಊರೊಳಕ್ಕೆ ಬಂದು ಹೋಗುತ್ತಿದ್ದರು. ಊರೊಳಗೆ ಓಡಾಡಿ ಓಣಿಗಳಲ್ಲಿ ಅಲ್ಲಲ್ಲಿ ಬಿದ್ದಿದ್ದ ಕಸ ಕಡ್ಡಿಯನ್ನು ಅವರೇ ಗುಡಿಸಿ, ಒಂದುಕಡೆ ಗುಡ್ಡೆ ಹಾಕಿ ಸುಟ್ಟರು. ಊರವರು ಅದನ್ನೆಲ್ಲ ಸುಮ್ಮನೆ ನಿಂತು ನೋಡಿದರೇ ವಿನಾ ಅವರ ಜತೆ ಸೇರಿ ಕಸ ಗುಡಿಸಲು ಮುಂದಾಗಲಿಲ್ಲ. ನೈರ್ಮಲ್ಯ ಸಮಿತಿಯವರು ವಾರಕ್ಕೊಮ್ಮೆ ಊರಿಗೆ ಬಂದು ಕಸ ಗುಡಿಸಿದರೆ ಚೆನ್ನಾಗಿರುತ್ತೆ ಅಂತ ಮಾತಾಡಿಕೊಂಡರು.

ಸುಮಾರು ನೂರಿಪ್ಪತ್ತು ವರ್ಷಗಳ ಹಿಂದೆ ಕಟ್ಟಿದ್ದ ಗ್ರಾಮದೇವತೆ ಹೊಸಳ್ಳಮ್ಮನ ಗುಡಿಯನ್ನು ಕೆಡವಿ ಹೊಸದನ್ನು ಕಟ್ಟುವ ಮಾತು ಕೇಳಿ ಬಂದವು! ಊರಿನ ಯುವಕರು ದೈಹಿಕವಾಗಿ ಶಕ್ತಿವಂತರಾಗಬೇಕು ಅಂತ ಉಪದೇಶ ಮಾಡುವವರೂ ಬಂದರು. ಸಂಜೆ ಹೊತ್ತು ಅವರನ್ನೆಲ್ಲ ಮಿಡ್ಲ್ ಸ್ಕೂಲಿನ ಮೈದಾನದಲ್ಲಿ ಸೇರಿಸಿಕೊಂಡು ಕಬಡ್ಡಿ ಆಡಿಸುತ್ತಿದ್ದರು. ಆಮೇಲೆ ಸ್ವಲ್ಪ ಹೊತ್ತು ಅದೂ ಇದೂ ಮಾತಾಡುತ್ತಿದ್ದರು. ಈ ಬೆಳವಣಿಗೆ ಹೊಸಳ್ಳಿಯ ಬಹಳಷ್ಟು ಜನರಿಗೆ ಇಷ್ಟವಾಗಲಿಲ್ಲ. ಕತ್ತಲಾಗುತ್ತಿದ್ದಂತೆ ಅವರು ಊರಿಂದ ಹೋಗಿಬಿಡುತ್ತಿದ್ದರು. ಇವರೆಲ್ಲ ಯಾರು? ಅವರ ಉದ್ದೇಶವೇನು ಅನ್ನೋದು ಗೊತ್ತಾಗಲಿಲ್ಲ. ಆದರೆ, ಕೆಲವರು ಅದರಲ್ಲಿ ತಪ್ಪೇನಿದೆ ಅಂತ ಕೇಳಲು ಶುರು ಮಾಡಿದರು.

ಹಳೆಯ ಗುಡಿಗಳನ್ನು ಜೀರ್ಣೋದ್ಧಾರ ಮಾಡುತ್ತೇವೆ ಅಂತ ಹೇಳಿಕೊಂಡು ಐದಾರು ಜನ ಊರಿಗೆ ಬಂದರು. ದಾನಿಗಳ ನೆರವಿನಿಂದ ಪ್ರಾಚೀನ ಗುಡಿಗಳ ಪುನರುಜ್ಜೀವನ ಯೋಜನೆ ಅಡಿಯಲ್ಲಿ ಹೊಸಳ್ಳಮ್ಮನ ಗುಡಿ ಕಟ್ಟಿಸಿಕೊಡುತ್ತೇವೆ ಅಂತ ಹೇಳಿದರು. ಗುಡಿ ಪರಿಶೀಲನೆ ಮಾಡಿದರು. ಪ್ರೆಸಿಡೆಂಟರ ಹತ್ತಿರ ಚರ್ಚೆ ಮಾಡಿದರು. ಹೊಸ ಗುಡಿ ಕಟ್ಟಲು ಹತ್ತು ಲಕ್ಷ ರೂಪಾಯಿ ದೇಣಿಗೆ ಕೊಡುವುದಾಗಿ ಘೋಷಣೆ ಮಾಡಿದರು! ಪ್ಲಾನು ನಾವೇ ಮಾಡಿಸಿಕೊಡುತ್ತೇವೆ. ನಮ್ಮ ಎಂಜಿನಿಯರುಗಳೇ ನಿಂತು ಗುಡಿ ಕಟ್ಟಿಸುತ್ತಾರೆ ಅಂತಲೂ ಹೇಳಿದರು. ಊರವರು ತಮ್ಮ ಕೈಲಾದ ಸಹಾಯ ಮಾಡಿದರೆ ಸಾಕು. ಯಾರೂ ದುಡ್ಡು ಕೊಡಬೇಕಿಲ್ಲ. ಇಟ್ಟಿಗೆ, ಸಿಮೆಂಟು, ಮರ, ಸ್ಟೀಲು ಕೊಡಬಹುದು. ಅದನ್ನೂ ಕೊಡಲು ಆಗದವರು ಗುಡಿ ಕಾಮಗಾರಿಯಲ್ಲಿ ದುಡಿದರೆ ಸಾಕು ಅಂತ ಸಮಿತಿಯ ಅಧ್ಯಕ್ಷರು ಹೇಳಿದರು. ಅವರ ಮಾತು ಊರ ಜನಕ್ಕೆ ಇಷ್ಟವಾಯಿತು.